ದೂರವಾಣಿ ಸಂಖ್ಯೆ : 2419209/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ದಿನಾಂಕ 09.01.2019

ಸಂಖ್ಯೆ-ಜಿಎಲ್3/660/2018-19

## ಅ ಧಿ ಸೂ ಚ ನೆ

## ವಿಶ್ವವಿದ್ಯಾನಿಲಯದ 99ನೆಯ ವಾರ್ಷಿಕ ಘಟಿಕೋತ್ಸವ

**ಮೈಸೂರು ವಿಶ್ವವಿದ್ಯಾನಿಲಯದ 99ನೆಯ ವಾರ್ಷಿಕ ಘಟಿಕೋತ್ಸವವನ್ನು 2019ನೇ ಸಾಲಿನ ಫೆಬ್ರವರಿ/ಮಾರ್ಚ್ ಮಾಹೆಯಲ್ಲಿ ಏರ್ಪಡಿಸಲು ತೀರ್ಮಾನಿಸಲಾಗಿದೆ**

1. ಘಟಿಕೋತ್ಸವಕ್ಕೆ ಈ ಕೆಳಗಿನ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶವಿದೆ:
   ಅ. ಸ್ನಾತಕೋತ್ತರ ಪದವಿ ಅಭ್ಯರ್ಥಿಗಳು
   ಆ. ಡಾಕ್ಟರೇಟ್ ಪದವಿ ಅಭ್ಯರ್ಥಿಗಳು
   ಇ. ಎಲ್ಲಾ ಪದವಿಗಳ ಪದಕ/ಬಹುಮಾನ ವಿಜೇತ ಅಭ್ಯರ್ಥಿಗಳು
2. ಬಿ.ಇಡಿ., ಎಲ್.ಎಲ್.ಬಿ., ಬಿ.ಪಿ.ಇಡಿ. ಇತ್ಯಾದಿ ಪದವಿಗಳು ಆಯಾ ಕ್ಷೇತ್ರಗಳಲ್ಲಿ ಪ್ರಥಮ ಪದವಿಗಳಾದ್ದರಿಂದ ಅವುಗಳನ್ನು ಸ್ನಾತಕೋತ್ತರ ಪದವಿಗಳೆಂದು ಪರಿಗಣಿಸುವಂತಿಲ್ಲ. ಆದರೆ, ಈ ಪದವಿಗಳಲ್ಲಿ ಪದಕ ಹಾಗೂ ಬಹುಮಾನ ವಿಜೇತ ಅಭ್ಯರ್ಥಿಗಳು ಮಾತ್ರ ಭಾಗವಹಿಸಬಹುದು.
3. ಅಭ್ಯರ್ಥಿಗಳು ಪದವಿ ಪತ್ರಗಳನ್ನು **"ಹಾಜರಿ ಅಥವಾ "ಗೈರು ಹಾಜರಿಯಲ್ಲಿ''** ಪಡೆಯಲು ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕಳುಹಿಸಿದ ನಿಗದಿತ ಅರ್ಜಿ ನಮೂನೆಯನ್ನು ತಾವು ಹಿಂದೆ ವ್ಯಾಸಂಗ ಮಾಡಿದ ಕಾಲೇಜಿನಲ್ಲಿ/ ಕುಲಸಚಿವ (ಪರೀಕ್ಷಾಂಗ)ರವರ ಕಛೇರಿಯಲ್ಲಾಗಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಘಟಿಕೋತ್ಸವ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
4. **"ಗೈರು ಹಾಜರಿಯಲ್ಲಿ''**, ಪದವಿ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಘಟಿಕೋತ್ಸವದ ನಂತರ ಅವರವರ ವಿಳಾಸಕ್ಕೆ ನೇರವಾಗಿ ರಿಜಿಸ್ಟರ್ಡ್ ಅಂಚೆ/ಸ್ಪೀಡ್ ಪೋಸ್ಟ್ (BNPL) ಮೂಲಕ ಪದವಿ ಪತ್ರಗಳನ್ನು ಕುಲಸಚಿವ (ಪರೀಕ್ಷಾಂಗ) ರವರಿಂದ ಕಳುಹಿಸಲಾಗುವುದು.
5. ಸೆಪ್ಟಂಬರ್/ಅಕ್ಟೋಬರ್ 2017 ಮತ್ತು ಮೇ/ಜೂನ್ 2018ರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ಘಟಿಕೋತ್ಸವದಲ್ಲಿ ಭಾಗವಹಿಸಬಹುದು(ಪದವಿಯ ಅಂತಿಮ ವರ್ಷದ/ಸೆಮಿಸ್ಟರ್ ಅಂಕಪಟ್ಟಿಯಲ್ಲಿ "Class Declaration''ಆಗಿರತಕ್ಕದ್ದು).
6. ಸೆಪ್ಟಂಬರ್/ಅಕ್ಟೋಬರ್ 2018ರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಘಟಿಕೋತ್ಸವದಲ್ಲಿ ಭಾಗವಹಿಸುವಂತಿಲ್ಲ, (ಬಿ.ಇಡಿ. ಪದವಿ ಪರೀಕ್ಷೆಗಳನ್ನು ಹೊರತುಪಡಿಸಿ).
7. **ಪದವಿ ಪತ್ರ ಪಡೆಯಲು ನಿಗದಿಯಾಗಿರುವ ಶುಲ್ಕ ಈ ಕೆಳಕಂಡಂತೆ ಇದೆ:**

| ಕ್ರ. ಸಂ. | ವಿವರ | ಸಾಮಾನ್ಯರಿಗೆ ರೂ. | ಪರಿಶಿಷ್ಟ ಜಾತಿ/ವರ್ಗ ಮತ್ತು ಪ್ರವರ್ಗ-1 ರೂ. |
|---|---|---|---|
| 1 | ಪಿ.ಎಚ್.ಡಿ. ಪದವಿ | 2420-00 | 1100-00 |
| 2 | ಸ್ನಾತಕೋತ್ತರ/ಎಲ್.ಎಲ್.ಬಿ./ಬಿ.ಇಡಿ.ಪದವಿ | 1760-00 | 820-00 |
| 3 | ಇತರೆ ಪದವಿಗಳು | 1320-00 | 600-00 |

**ಸೂಚನೆ:** ಅಂತಿಮ ಪರೀಕ್ಷಾ ಸಮಯದಲ್ಲಿ ಘಟಿಕೋತ್ಸವದ ಶುಲ್ಕವನ್ನು ಈಗಾಗಲೇ ಪಾವತಿಸಿರುವ ಅಭ್ಯರ್ಥಿಗಳು ಪುನಃ ಶುಲ್ಕ ಪಾವತಿಸಬೇಕಾಗಿಲ್ಲ. ಪರಿಶಿಷ್ಟ ಜಾತಿ/ವರ್ಗ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳು ಸಕ್ಷಮ ಅಧಿಕಾರಿಯಿಂದ ಪಡೆದ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯ ಜೊತೆ ಲಗತ್ತಿಸಬೇಕು. ಘಟಿಕೋತ್ಸವ ಶುಲ್ಕವನ್ನು ಚಲನ್ ಮೂಲಕ ಮೈಸೂರು ವಿಶ್ವವಿದ್ಯಾನಿಲಯದ **"ಪರೀಕ್ಷಾ ಖಾತೆ"**ಗೆ ಪಾವತಿಸತಕ್ಕದ್ದು ಅಥವಾ ಡಿ.ಡಿ. ಮುಖೇನ ಹಣಕಾಸು ಅಧಿಕಾರಿಗಳ ಹೆಸರಿಗೆ ಪಡೆದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದು.

8. ಭರ್ತಿ ಮಾಡಿದ ಅರ್ಜಿ ಜೊತೆಯಲ್ಲಿ ಹಣ ಪಾವತಿ ಮಾಡಿದ ಮೂಲ ಚಲನ್/ಡಿ.ಡಿ. ಮತ್ತು ಅಂತಿಮ ವರ್ಷದ ಅಂಕಪಟ್ಟಿಯ ಛಾಯಾ ಪ್ರತಿಯನ್ನು (ಜೆರಾಕ್ಸ್) ತಪ್ಪದೆ ಲಗತ್ತಿಸಿ (**ಕ್ರೋಡೀಕೃತಗೊಂಡ (ಕನ್ಸಾಲಿಡೇಟ್) ಅಂಕಪಟ್ಟಿಯನ್ನು** ಲಗತ್ತಿಸಬಾರದು) ಈ ಕೆಳಕಂಡ ದಿನಾಂಕಗಳ ಒಳಗೆ *ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570005, ಈ ವಿಳಾಸಕ್ಕೆ ಕಳುಹಿಸತಕ್ಕದ್ದು.

| | |
|---|---|
| *1. ದಂಡ ಶುಲ್ಕವಿಲ್ಲದೆ | ದಿನಾಂಕ : 08.02.2019 |
| 2. ದಂಡ ಶುಲ್ಕ ರೂ.100-00ಗಳೊಂದಿಗೆ | ದಿನಾಂಕ : 16.02.2019 |

Rajkumar 9/1/19
ಕುಲಸಚಿವ

Tel.No.: 2419209/2419361
Fax:0821-2419363/2419301

e-mail : registrar@uni-mysore.ac.in
www.uni-mysore.ac.in

UNIVERSITY OF MYSORE

Estd.1916

VishwavidyanilayaKaryasoudha
Crawford Hall, Mysuru 570 005

No.GL3/660/2018-19

Date: 09.01.2019

## NOTIFICATION

## 99th ANNUAL CONVOCATION OF THE UNIVERSITY

It is hereby notified for the information of the candidates that the 99th Annual Convocation of the University of Mysore will be held on February/March 2019.

1. Admission to the convocation is open to:
   a. Candidates for the Post-Graduate Degrees
   b. Candidates for the Doctorate Degrees and
   c. Candidates who are winners of Medals/Prizes of all Degrees.
2. Candidates for Degrees such as B.Ed., LL.B., B.P.Ed., etc. are not considered as candidates for Post-Graduate degrees since the above said degrees are basic degrees in the respective specialization and admission to the Convocation in their cases is restricted only to those candidates who are Medalists and Prizes winners.
3. Candidates may obtain their degrees either **'IN PERSON or IN ABSENTIA'**, by applying in the prescribed form issued by the **Registrar (Evaluation)**, University of Mysore, Mysuru OR by obtaining from the concerned colleges where they studied or by obtaining from University during office hours.
4. Certificates to the candidates who apply for taking degrees **IN ABSENTIA'**, will be sent to them directly through Registered Post / Speed Post (BNPL) by the Registrar (Evaluation), University of Mysore, Mysuru after the Convocation.
5. Candidates who have passed the degree examinations with the **'Class Declaration'** in the Final year/Semester Marks Card at the examinations held during **September/October 2017 and May/June 2018 are eligible for applying for taking degree in this Convocation.**
6. Candidates who have passed their degree examinations held during September/October 2018 **are not eligible for obtaining** their degrees at this Convocation except **B.Ed. DEGREE EXAMINATIONS.**
7. Fee for obtaining the concerned **Degree Certificate** is noted below:

| Sl.No. | Particulars | General Rs. | SC/ST/Cat-1 Rs. |
|---|---|---|---|
| 1 | Ph.D. | 2420-00 | 1100-00 |
| 2 | P.G.Degree/ LLB/ B.Ed. | 1760-00 | 820-00 |
| 3 | Others | 1320-00 | 600-00 |

**NOTE:** Those who have paid the Convocation Fee at the time of Final Examination need not pay again. Candidates belonging to SC/ST and Cat-1 shall enclose a Photostat copy of the Caste Certificate issued by the Competent Authority in their application. The Fee has to be remitted to the **"EXAMINATION ACCOUNT"** University of Mysore, Mysuru OR D.D. drawn in favour of The Finance Officer, University of Mysore, Mysuru for the purpose of Convocation Fee.

8. Duly filled in applications along with the challan/D.D. and photostat copies of Final Year marks card (not consolidated marks cards) should be sent to the Registrar (Evaluation), University of Mysore, Mysore-570 005 on or before:

   **I) without fine** - **08.02.2019**
   **2) With fine of Rs.100/-** - **16.02.2019**

Raghu 9/1/19

**REGISTRAR**